# ಧೈರ್ಯಶಾಲಿ ರಜಪೂತ



■ ವೇದಾವತಿ ಹೆಚ್.ಎಸ್.

ಬಹಳ ವರ್ಷಗಳ ಹಿಂದೆ ರಾಜಾಸ್ತಾನದಲ್ಲಿ ಹಿಮ್ಮತ್‌ಸಿಂಗ್ ಎಂಬ ರಜಪೂತನಿದ್ದನು. ಅವನು ತುಂಬ ಬಡವನಾಗಿದ್ದನು. ಅವನ ಬಳಿಯಲ್ಲಿ ಕೇವಲ ಎರಡು ಕಾಸುಗಳಿದ್ದವು. ಇರುವ ಎರಡು ಕಾಸುಗಳಲ್ಲಿ ಬೇರೆ ಯಾವುದಾದರೂ ಊರಿಗೆ ಹೋಗಿ ಜೀವನ ನೆಡೆಸಬೇಕೆಂದುಕೊಂಡನು. ದಾರಿಯಲ್ಲಿ ಹೋಗುವಾಗ ತನ್ನಲ್ಲಿರುವ ಅರ್ಧ ಕಾಸಿಗೆ ಕಡಲೆಕಾಳು ತೆಗೆದುಕೊಂಡು ಮುಂದೆ ಸಾಗಿದನು. ರಾಜಪೂತನು ಮುಂದೆ ನೆಡೆದು ಹೋಗುವಾಗ ಅವನಿಗೆ ದಾರಿಯ ಮಧ್ಯೆ ವ್ಯಾಪಾರಿಯೊಬ್ಬನು ಸಿಕ್ಕಿದನು. ಅವರಿಬ್ಬರು ಒಟ್ಟಿಗೆ ನೆಡೆದು ಹೋಗುತ್ತಿದ್ದರು. ವ್ಯಾಪಾರಿಯೂ ಏನೂ ಮಾತನಾಡದೇ ಮೌನವಾಗಿದ್ದನು.

ಆಗ ರಜಪೂತನು 'ಏಕೆ ಮಾತನಾಡುವುದಿಲ್ಲ. ಮೌನವಾಗಿರಲು ಕಾರಣವೇನು?' ಎಂದು ಅವನಲ್ಲಿ ಕೇಳಿದನು.

ಅದಕ್ಕವನು 'ನನ್ನ ಮಾತು ಬಲು ಬೆಲೆ ಉಳ್ಳದ್ದು' ಎಂದು ಹೇಳಿ ಸುಮ್ಮನಾದನು.

ವ್ಯಾಪಾರಿಯ ಮಾತುಗಳನ್ನು ಕೇಳಿ ರಜಪೂತನಿಗೆ ಕುತೂಹಲವುಂಟಾಯಿತು. ಅವನಿಗೆ ತನ್ನಲ್ಲಿರುವ ಅರ್ಧ ಕಾಸು ಕೊಟ್ಟನು. ರಜಪೂತನು ಅರ್ಧ ಕಾಸು ಕೊಟ್ಟ ನಂತರ ವ್ಯಾಪಾರಿಯು ಅವನಲ್ಲಿ 'ಪ್ರಯಾಣ ಕಾಲದಲ್ಲಿ ಒಬ್ಬರಿಗಿಂತ ಇಬ್ಬರಿರುವುದು ಮೇಲು' ಎಂದು ಹೇಳಿ ಮಾತನ್ನು ನಿಲ್ಲಿಸಿದನು.

ರಜಪೂತನು ಇನ್ನರ್ಧ ಕಾಸು ವ್ಯಾಪಾರಿಗೆ ಕೊಟ್ಟಾಗ 'ಅಪರಿಚಿತ ಸ್ಥಳದಲ್ಲಿ ಎಚ್ಚರವಾಗಿರಬೇಕು' ಎಂದು ಹೇಳುತ್ತಾ ಮುಂದೆ ಹೆಜ್ಜೆ ಹಾಕಿದನು.

ರಜಪೂತನಿಗೆ ಅವನ ಮಾತುಗಳು ಒಗಟಿನಂತಿರುವಂತೆ ಅನ್ನಿಸಲಾರಂಭಿಸಿತು. ವ್ಯಾಪಾರಿಗೆ ಈಗ ಪುನಃ ಉಳಿದ ಅರ್ಧ ಕಾಸನ್ನೂ ಕೊಟ್ಟುಬಿಟ್ಟನು.ಆಗ ವ್ಯಾಪಾರಿ 'ನಿನ್ನ ಬಳಿಯಲ್ಲಿರುವ ಕತ್ತಿ ಚೂಪಾಗಿರಬೇಕು' ಎಂದು ಹೇಳಿ ಬೇರೊಂದು ದಾರಿಯಲ್ಲಿ ಹೊರಟು ಹೋದನು.

ರಜಪೂತ ಒಬ್ಬನೇ ಮುಂದೆ ಪ್ರಯಾಣ ಮಾಡುತ್ತಿರುವಾಗ ಅವನಿಗೆ ಒಂದು ಸಣ್ಣ ಆಮೆ ಸಿಕ್ಕಿತು. ಆಮೆಯನ್ನು ನೋಡಿದಾಗ ರಜಪೂತನಿಗೆ ವ್ಯಾಪಾರಿಯು ಹೇಳಿದ ಮಾತು ನೆನಪಿಗೆ ಬಂದಿತು. ಪ್ರಯಾಣ ಕಾಲದಲ್ಲಿ ಇಬ್ಬರಿರುವುದು ಮೇಲು ಎಂದು ಆಮೆಯನ್ನು ಎತ್ತಿಕೊಂಡು ಹೊರಟನು. ರಜಪೂತ ಮುಂದೆ ಸಾಗುವಷ್ಟರಲ್ಲಿ ಆಮೆಯನ್ನು ಎತ್ತಿಕೊಂಡ ಕೈ ನೋವು ಬರಲು ಪ್ರಾರಂಭವಾಯಿತು. ಅರ್ಧ ಕಾಸು ಹೋಯಿತೇ ಎಂದುಕೊಂಡು ಅಮೆಯನ್ನು ನೀರಿನಲ್ಲಿ ಬಿಟ್ಟನು.

ರಜಪೂತನಿಗೆ ನೀರಿನಲ್ಲಿ ಲೋಹದ ಶಬ್ದ